

ಚಲನಚಿತ್ರ ಕಿರುಪುಸ್ತಕ

ಅಭಿವೃದ್ಧಿಗಾಗಿ ಸಿನೆಮಾ

ಕೆ. ವಿ. ಸುಬ್ಬಣ್ಣ

ಅಭಿವೃದ್ಧಿಗಾಗಿ ಸಿನೆಮಾ

ನೀನಾಸಮ್ ಚಿತ್ರಸಮಾಜ ಹೆಗ್ಗೋಡು
ಪರವಾಗಿ
ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ

ABHIVRIDDHIGAGI CINEMA: (Kannada) by K.V. Subbanna; Printed at Arasa Mudrana, Bangalore and Published by Akshara Prakashana, Sagar (Karnataka) 577 401; for Ninasam Chitrasamaja, Heggodu; Second Impression : Sept 83; Pages : 12plus 2; Price Rs. 2.

ಬೆಲೆ : ಎರಡು ರೂಪಾಯಿ

ಅಭಿವೃದ್ಧಿಗಾಗಿ ಸಿನೆಮಾ

ಸಂಪರ್ಕಮಾಧ್ಯಮಗಳನ್ನು ದೊಡ್ಡದಾಗಿ ಹೀಗೆ ವಿಂಗಡಿಸಬಹುದು :

೧. ಮಾನವ ಕುಲ ತನ್ನ ಬೆಳವಣಿಗೆಯಲ್ಲಿ ಕ್ರಮೇಣ ರೂಪುಗೊಳಿಸಿಕೊಂಡು ಬಂದ ಸಂಪರ್ಕಸಾಧನಗಳಾದ ಭಾಷೆಗಳು—ಶಾಬ್ದಿಕ ಭಾಷೆಗಳು, ನೃತ್ಯ, ಸಂಗೀತ, ಚಿತ್ರ, ಶಿಲ್ಪ, ರಂಗಭೂಮಿ ಮುಂತಾದವು.

೨. ವಿಜ್ಞಾನಯುಗ ಪ್ರಾರಂಭವಾದ ಮೇಲೆ, ಆ ಹಳೆಯ ಭಾಷೆಗಳನ್ನೇ ವಿಶಾಲವಾದ ಸಾಮೂಹಿಕ ಸಂಪರ್ಕಕ್ಕೆ ಅಳವಡುವಂತೆ ಯಾಂತ್ರಿಕಸಾಧನಗಳ ಮೂಲಕ ರೂಪಿಸಿಕೊಂಡಂಥ ಸಮೂಹಸಂಪರ್ಕ ಮಾಧ್ಯಮಗಳು—ವೃತ್ತಪತ್ರಿಕೆಗಳು, ಪುಸ್ತಕಗಳು, ರೇಡಿಯೋ ಇತ್ಯಾದಿ.

೩. ವಿಜ್ಞಾನಯುಗದ ಕೂಸಾಗಿ ಹುಟ್ಟಿಕೊಂಡ ಹಾಗೂ ಸಮೂಹಸಂಪರ್ಕ ಮಾಧ್ಯಮವಾಗಿಯೇ ರೂಪುಗೊಂಡ ಯಾಂತ್ರಿಕ ಸಾಧನದ ಹೊಸ ಭಾಷೆ-ಸಿನೆಮಾ.

ಈ ವಿಂಗಡನೆಯಲ್ಲಿಯೇ ನಾವು ಸಿನೆಮಾದ ವೈಶಿಷ್ಟ್ಯವನ್ನು ಗುರುತಿಸಿಕೊಳ್ಳಬಹುದು. ಜನಸಂಪರ್ಕಕ್ಕೆ ಮತ್ತು ಜನಶಿಕ್ಷಣಕ್ಕೆ ಸಿನೆಮಾವನ್ನು ಉಳಿದೆಲ್ಲಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಎಂಬ ಹೇಳಿಕೆಯನ್ನು ಕೂಡ ಇದು ಸಮರ್ಥಿಸುತ್ತದೆ.

ಸಾಮೂಹಿಕ ಅಭಿವೃದ್ಧಿಗೋಸ್ಕರ ಹೆಣಗುತ್ತಿರುವ ಇಂಡಿಯಾದ ದೃಷ್ಟಿಯಿಂದ ಹೇಳುವುದಾದರೆ-ಹಲವಾರು ಶಾಬ್ದಿಕ ಭಾಷೆಗಳಿಂದ ವಿಭಜನೆಗೊಂಡಿರುವ ಹಾಗೂ ಬಹುಸಂಖ್ಯಾತರು ಅನಕ್ಷರಸ್ಥರಾಗಿರುವ ಈ ದೊಡ್ಡ ದೇಶದಲ್ಲಿ ಸಿನೆಮಾ ಜನಸಂಪರ್ಕ

ಸಾಧನವಾಗಿ ಎಲ್ಲಕ್ಕೂ ಹೆಚ್ಚಿನ ಆದ್ಯತೆ ಪಡೆಯಬೇಕು. ಆದರೆ, ಸ್ವಾತಂತ್ರ್ಯಾನಂತರ ಇಂಡಿಯಾ ಪ್ರಾರಂಭಿಸಿದ ಅಭಿವೃದ್ಧಿಯ ಹೊಸ ಪ್ರಯತ್ನದಲ್ಲಿ, ಈ ೩೦ ವರ್ಷಗಳ ಕಾಲ, ನಾವು ಈ ಶಕ್ತಿಶಾಲಿ ಮಾಧ್ಯಮವನ್ನು ಎಷ್ಟುಮಟ್ಟಿನ ಉಪಯುಕ್ತ ಬಳಕೆಗೆ ನಿರ್ದೇಶಿಸಿಕೊಂಡಿದ್ದೇವೆ ಎಂಬುದನ್ನು ನೋಡಿಕೊಂಡರೆ ಆಶ್ಚರ್ಯವಾಗುತ್ತದೆ, ನಿರಾಶೆಯಾಗುತ್ತದೆ.

ಸಿನೆಮಾ ಅಸ್ತಿತ್ವಕ್ಕೆ ಬಂದು ೬ ತಿಂಗಳು ಕಳೆಯುವ ಮೊದಲೇ ಅದು ಇಂಡಿಯಾಕ್ಕೂ ಬಂತು. ಇಂಡಿಯಾ ಮತ್ತು ರಷ್ಯಾಗಳೆರಡರಲ್ಲೂ ಸಿನೆಮಾದ ಪ್ರಥಮ ಪ್ರದರ್ಶನ ನಡೆದದ್ದು ಒಂದೇ ದಿನ. ೧೯೩೦ರ ಹೊತ್ತಿಗೆ ಅದು ಇಂಡಿಯಾದಲ್ಲಿ ಗಣನೀಯ ಉದ್ಯಮವಾಗಿ ಬೆಳೆದಿತ್ತು. ೨ನೇ ಮಹಾಯುದ್ಧದ ಅನಂತರದ ದಿನಗಳಲ್ಲಿ, ಇಂಡಿಯಾ ಜಗತ್ತಿನಲ್ಲಿಯೇ ಹೆಚ್ಚು ಸಂಖ್ಯೆಯ ಚಿತ್ರಗಳನ್ನು ತಯಾರಿಸುವ ದೇಶಗಳಲ್ಲಿ ಒಂದಾಗಿ, ಒಂದು-ಎರಡನೆಯ ಸ್ಥಾನಗಳನ್ನು ಗಳಿಸಿಕೊಳ್ಳತೊಡಗಿತು. ಈ ಮಧ್ಯೆ ಸರ್ಕಾರ ಕೂಡ ಅದರ ಕಣ್ಣು ಕುಕ್ಕುವ ಲಾಭದಲ್ಲಿ ಒಂದು ಪಾಲನ್ನು ಪಡೆದುಕೊಳ್ಳಲು ಮತ್ತು ತನ್ನ ದೃಷ್ಟಿಯಲ್ಲಿ ಅದು ಜನರ ಮೇಲೆ ಅನಪೇಕ್ಷಿತ ಪರಿಣಾಮವನ್ನುಂಟುಮಾಡುವಂತೆ ಹತೋಟಿಯಲ್ಲಿಟುಕೊಳ್ಳಲು ಮುಂದಾಯಿತು. ೧೯೧೮ರಲ್ಲಿ ಸೆನ್ಸಾರ್ ರೂಢಿಗೆ ಬಂದಿತು. ೨ನೇ ಮಹಾಯುದ್ಧದ ಕಾಲದಲ್ಲಿ ಆಗಿನ ಬ್ರಿಟಿಷ್ ಸರ್ಕಾರ 'Film Advisory Board,' 'Information Films of India' ಎಂಬ ಹೆಸರುಗಳಲ್ಲಿ ಯುದ್ಧಕ್ಕೆ ನೆರವಾಗುವ ಪ್ರಚಾರಚಿತ್ರಗಳನ್ನು ತಾನೇ ನಿರ್ಮಿಸಿ ಅವುಗಳ ಪ್ರದರ್ಶನವನ್ನು ಕಡ್ಡಾಯಗೊಳಿಸಿತು. ಮುಂದೆ, ಸ್ವಾತಂತ್ರ್ಯ ಬಂದ ಮೇಲೆ ೧೯೪೮ರಲ್ಲಿ Films Division of the Government of India ಸ್ಥಾಪನೆಯಾಯಿತು. ಅಗ್ಗದ ಮನೋರಂಜನೆಯ ಉದ್ಯಮಚಿತ್ರಗಳಿಗೆ ವಿರುದ್ಧವಾಗಿ ಜನರ ಶಿಕ್ಷಣವನ್ನು ಸಾಧಿಸುವುದಕ್ಕೆ ಹಾಗೂ ರಾಷ್ಟ್ರ ಯೋಜಿಸಿಕೊಂಡ ಅಭಿವೃದ್ಧಿ ಪ್ರಯತ್ನಗಳಿಗೆ ಪ್ರಚಾರಸಾಧನವಾಗಿ ನಿಲ್ಲುವುದಕ್ಕೆ ಈ ಸರ್ಕಾರಿ ಸಂಸ್ಥೆಯ ಮೂಲಕ ಭಾರೀ ಸಂಖ್ಯೆಯ ಕಿರುಚಿತ್ರಗಳನ್ನು ತಯಾರಿಸಿ ರಾಷ್ಟ್ರದ ಎಲ್ಲಾ ಕಡೆ ಅವನ್ನು ಕಡ್ಡಾಯವಾಗಿ ಪ್ರದರ್ಶಿಸುವಂತೆ ಮಾಡಲಾಯಿತು. ಕ್ರಮೇಣ ಈ ಸಂಸ್ಥೆ, ಜಗತ್ತಿನ ಇಂಥಾ ಸರ್ಕಾರಿ ಸಂಸ್ಥೆಗಳಲ್ಲೇ ಬೃಹದಾಕಾರವಾಗಿ ಬೆಳೆದುಕೊಂಡಿದೆ. ಈ ಸಂಸ್ಥೆಯೊಂದೇ ಅಲ್ಲದೆ ಕೇಂದ್ರ ಸರ್ಕಾರದ ಬೇರೆ ಹಲವು ಇಲಾಖೆಗಳು, ರಾಜ್ಯ ಸರ್ಕಾರಗಳು, ಅರೆ ಸರ್ಕಾರಿ ಸಂಸ್ಥೆಗಳು, ಶೈಕ್ಷಣಿಕ ಹಾಗೂ ಪ್ರಚಾರಾತ್ಮಕ ಚಿತ್ರಗಳನ್ನು ನಿರ್ಮಿಸುವಲ್ಲಿ ಮತ್ತು ಅವನ್ನು ಸಂಚಾರಿ ವಾಹನಗಳ ಮೂಲಕ ಗ್ರಾಮಾಂತರಗಳಿಗೂ ಕೊಂಡೊಯ್ದು ಪ್ರದರ್ಶಿಸುವುದರಲ್ಲಿ ತೊಡಗಿವೆ. ಇದೇ ರೀತಿಯಲ್ಲಿ ಕೇಂದ್ರದ Field Publicity

Department ಮುಂತಾದವು Films Division ಹಾಗೂ ಇನ್ನಿತರ ಶೈಕ್ಷಣಿಕ ಚಿತ್ರಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ಒಯ್ದು ಪ್ರದರ್ಶಿಸುತ್ತಿವೆ.

ಹೀಗೆ, ಖಾಸಗಿ ಕಮರ್ಷಿಯಲ್ ಸಿನೆಮಾ ಮತ್ತು ಸರ್ಕಾರಿ ನಿಯಂತ್ರಿತ ಸಿನೆಮಾ—ಎಂಬ ಎರಡು ದೊಡ್ಡ ಭಾಗಗಳಾಗಿ ರೂಪುಗೊಂಡಿರುವ ಇಲ್ಲಿನ ಸಿನೆಮಾ ಹಾಸು ಹೊದಿಕೆಗಳಾಗಿ ಇಂಡಿಯಾವನ್ನು ಇಡೀ ಆವರಿಸಿಕೊಂಡಿವೆಯೇನೋ ಎನ್ನಿಸುತ್ತಿವೆ, ಮೇಲುನೋಟಕ್ಕೆ. ಅಪವಾದಗಳನ್ನು ಬಿಟ್ಟು ಒಟ್ಟಿನ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ—ನಮ್ಮ ಕಮರ್ಷಿಯಲ್ ಸಿನೆಮಾ ಅಭಿವ್ಯಕ್ತಿಯ ಸಾಧನವಾಗಿ ಇನ್ನೂ Primitive ಎನ್ನಬಹುದಾದ ಸ್ಥಿತಿಯಲ್ಲೇ ಕೊಳೆಯುತ್ತಿದ್ದು ಮಾನವನ ದೌರ್ಬಲ್ಯಗಳನ್ನೇ ನಗದುಗೊಳಿಸಿಕೊಳ್ಳುವ ಮುಖ್ಯೋದ್ದೇಶದಿಂದ ಅಗ್ಗದ ರಂಜನೆಯಾಗಿ ಜನರನ್ನು ಆಕರ್ಷಿಸುತ್ತಿದೆ. ತದ್ವಿರುದ್ಧವಾಗಿ, ಸರ್ಕಾರಿ ಸಿನೆಮಾ ಒಣ ಉಪದೇಶವಾಗಿ, ಬೇಡವೆಂದರೂ ನಿವಾರಿಸಿಕೊಳ್ಳಲು ಸಾಧ್ಯವಿಲ್ಲದ ಅನಿವಾರ್ಯ 'ಕರ್ಮ'ವಾಗಿ, ಕಡ್ಡಾಯವಾಗಿ, ಅವರ ಕಣ್ಣಿಗೆ ಅಂಟಿಕೊಳ್ಳುತ್ತಿದೆ. ನಮ್ಮ ಜನಜೀವನದ ಮೇಲೆ ಸಿನೆಮಾ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಬೀರಿರುವ ಪ್ರಭಾವ, ಜಗತ್ತಿನ ಬೇರೆ ದೇಶಗಳಲ್ಲಿ ಕಾಣಬಹುದಾದ ಇಂಥ ಪ್ರಭಾವಕ್ಕಿಂತ ಕಡಿಮೆಯಂತೂ ಅಲ್ಲವೇ ಅಲ್ಲ, ನಿಶ್ಚಯವಾಗಿ. ತಮಿಳುನಾಡಿನಲ್ಲಿ ಸಿನೆಮಾದ ಪ್ರಭಾವ ಅಲ್ಲಿನ ರಾಜ್ಯದ ರಾಜಕೀಯವನ್ನೇ ಹತೋಟಿಗೆ ತೆಗೆದುಕೊಳ್ಳಲೂ ಶಕ್ತವಾಯಿತಲ್ಲ—ಇಂಥ ಇನ್ನೊಂದು ಉದಾಹರಣೆ ಜಗತ್ತಿನಲ್ಲೇ ಇರಲಾರದು.

ನಮ್ಮ ಸಿನೆಮಾದ ಬಗ್ಗೆ ಮಾತಾಡುವ ಬರೆಯುವ ಎಲ್ಲರೂ ಸಾಮಾನ್ಯವಾಗಿ ಮೇಲೆ ಹೇಳಿರುವ ಅಂಶಗಳನ್ನು ಗಮನಿಸುತ್ತಾರೆ. ಆದರೆ, ಇವತ್ತಿಗೂ ನಮ್ಮ ದೇಶದ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನ ಸಿನೆಮಾದ ಕೈಚಾಚಿಗೆ ಎಟುಕದೆ ಹೊರಗುಳಿದಿದ್ದಾರೆ; ದೇಶದ ಕಾಲು ಭಾಗದ ಜನರ ಮೇಲೆ ಅಷ್ಟು ಪರಿಣಾಮ ಬೀರಿರುವ ಸಿನೆಮಾ ಉಳಿದ ಮುಕ್ಕಾಲು ಭಾಗ ಜನರಿಗೆ ಅಪರಿಚಿತ ಎನ್ನುವಂತಿದೆ—ಎಂಬ ಅಂಶವನ್ನು ಮಾತ್ರ ಯಾರೂ ಹೆಚ್ಚಾಗಿ ಗಮನಿಸುವುದೇ ಇಲ್ಲ. ಎಲ್ಲಕ್ಕಿಂತ ಹೆಚ್ಚು ಮೂಲಭೂತವಾದ ಈ ಊನವನ್ನು ನಾವು ಗಂಭೀರವಾಗಿ ಪರಿಗಣಿಸಿಯೇ ಇಲ್ಲವಲ್ಲ ಎಂದು ನನಗೆ ಖೇದವಾಗುತ್ತದೆ.

ಇಂಡಿಯಾದ ಜನಸಂಖ್ಯೆಯಲ್ಲಿ ಸುಮಾರು ಮುಕ್ಕಾಲು ಭಾಗ ವಾಸಿಸುವುದು ಗ್ರಾಮಾಂತರ ಪ್ರದೇಶಗಳಲ್ಲಿ. ೧೯೭೫-೭೬ರ ಸುಮಾರಿಗೆ ಈ ದೇಶದಲ್ಲಿದ್ದ ಒಟ್ಟು ಚಿತ್ರಮಂದಿರಗಳ ಸಂಖ್ಯೆ ಸುಮಾರಾಗಿ ೮೫೦೦. ಇವುಗಳಲ್ಲಿ ಸುಮಾರು ೫೭೦೦ ಖಾಯಂ ಚಿತ್ರಮಂದಿರಗಳು; ಸುಮಾರು ೨೮೦೦ ಸಂಚಾರಿ (ತಾತ್ಕಾಲಿಕ) ಚಿತ್ರಮಂದಿರಗಳು. ಒಟ್ಟಿನಲ್ಲಿ ಹೇಳುವುದಾದರೆ, ಖಾಯಂ ಚಿತ್ರಮಂದಿರಗಳು ನಗರ

ಪಟ್ಟಣ ಪ್ರದೇಶಗಳಲ್ಲೂ ತಾತ್ಕಾಲಿಕ ಚಿತ್ರಮಂದಿರಗಳು ಗ್ರಾಮಾಂತರ ಪ್ರದೇಶ ಗಳಲ್ಲೂ ಇವೆ ಎನ್ನಬಹುದು. ನಗರ ಪಟ್ಟಣಗಳಲ್ಲಿನ ಚಿತ್ರಮಂದಿರಗಳು ದಿನಕ್ಕೆ ೩-೪ ಷೋ ಕೊಡುತ್ತಿದ್ದರೆ ಗ್ರಾಮಾಂತರ ಚಿತ್ರಮಂದಿರಗಳು ೧-೨ ಷೋ ಕೊಡು ತ್ತವೆ; ಇದೇ ರೀತಿ, ಮೊದಲನೆಯುವುಗಳಲ್ಲಿನ ಆಸನ ಸಂಖ್ಯೆಯ ಸುಮಾರು ಅರ್ಧ ದಷ್ಟು ಮಾತ್ರ ಎರಡನೆಯ ಚಿತ್ರಮಂದಿರಗಳಲ್ಲಿ ಇರಬಹುದು; ಗ್ರಾಮಾಂತರಗಳಲ್ಲಿನ ಚಿತ್ರಮಂದಿರಗಳು ವರ್ಷವಿಡೀ ಪ್ರದರ್ಶನ ಕೊಡುವುದಿಲ್ಲ, ೮-೯ ತಿಂಗಳು ಮಾತ್ರ ಪ್ರದರ್ಶನ ಕೊಡುತ್ತವೆ; ಸಂಚಾರಿ ಚಿತ್ರಮಂದಿರಗಳಲ್ಲಿ ಕೂಡ ಕೆಲವು ಪಟ್ಟಣ ಪ್ರದೇಶಗಳಲ್ಲೇ ಇವೆ—ಎಂಬ ಅಂಶಗಳನ್ನು ಗಮನಿಸಬೇಕು. ಇದರಲ್ಲಿ ನಗರ ಪಟ್ಟಣಗಳ ಚಿತ್ರಗಳಲ್ಲಿ ಸಾಕಷ್ಟು ಗ್ರಾಮಾಂತರ ಪ್ರೇಕ್ಷಕರೂ ಚಿತ್ರ ನೋಡುತ್ತಾರೆ ಎಂಬ ಅಂಶವನ್ನು ಲೆಕ್ಕಕ್ಕೆ ತೆಗೆದುಕೊಂಡು ಆ ಬಗ್ಗೆ ಕಳೆದರೂ, ೨೫:೭೫ ದಾಮಾಶಾ ದಲ್ಲಿರುವ ನಗರಪಟ್ಟಣಗಳಲ್ಲಿನ ಜನ ಹಾಗೂ ಗ್ರಾಮಾಂತರದ ಜನ ಪಡೆಯು ತ್ತಿರುವ ಸಿನೆಮಾ ಪ್ರದರ್ಶನದ ಅವಕಾಶದಲ್ಲಿ ಅತ್ಯಪಾರವಾದ ಅಂತರ ಕಾಣುತ್ತದೆ. (ಅದು ಸುಮಾರಾಗಿ ಶೇ. ೨೫ ಜನಕ್ಕೆ ಶೇ. ೮೫ ಅವಕಾಶ ಮತ್ತು ಶೇ. ೭೫ ಜನಕ್ಕೆ ಶೇ. ೧೫ ಅವಕಾಶ—ಎನ್ನುವ ಅಂತರ ಕಾಣಿಸಬಹುದು.)

ಕರ್ನಾಟಕದ ಉದಾಹರಣೆ ನೋಡಬಹುದು : ಇಲ್ಲಿರುವ ಖಾಯಂ ಚಿತ್ರ ಮಂದಿರಗಳ ಸಂಖ್ಯೆ ಸುಮಾರು ೪೫೦. ಅವು-ಇವುಗಳಲ್ಲಿನ ಆಸನ ಸಂಖ್ಯೆ, ಷೋ ಸಂಖ್ಯೆ, ವರ್ಷದಲ್ಲಿನ ಪ್ರದರ್ಶನಾವಧಿ ಮುಂತಾದ ಹಿಂದೆ ಹೇಳಿದ ವ್ಯತ್ಯಾಸಗಳನ್ನು ಗಮನಿಸಿ ಹೇಳುವುದಾದರೆ, ಇಲ್ಲಿ ಕೂಡಾ ಅದೇ ಮೇಲೆ ಹೇಳಿದ ೨೫ಕ್ಕೆ ೮೫ ಮತ್ತು ೭೫ಕ್ಕೆ ೧೫ ದಾಮಾಶಾದ ಅವಕಾಶವೇ ಇರುವಂತೆ ಕಾಣುತ್ತದೆ. ಕರ್ನಾಟಕದ ಜನ ಸಂಖ್ಯೆ ಸುಮಾರು ೩ ಕೋಟಿ. ಬೆಂಗಳೂರು ನಗರದ ಜನಸಂಖ್ಯೆ ಸುಮಾರು ೨೦ ಲಕ್ಷ. ಆದರೆ, ಕರ್ನಾಟಕದಲ್ಲಿರುವ ಸುಮಾರು ೫೦೦ ಖಾಯಂ ಚಿತ್ರಮಂದಿರಗಳ ಪೈಕಿ ಸುಮಾರು ೧೦೦ ಕ್ಕೂ ಹೆಚ್ಚು ಬೆಂಗಳೂರು ನಗರವೊಂದರಲ್ಲೇ ಇವೆ. ಯಾವುದೇ ಕನ್ನಡ ಚಿತ್ರದಲ್ಲಿ ತೊಡಗಿಸಿದ ಹಣ ಹಿಂದಕ್ಕೆ ಬರುವುದಿದ್ದರೆ ಅದು ಬೆಂಗಳೂರು ನಗರವೊಂದರಲ್ಲಿನ ಪ್ರದರ್ಶನದಿಂದ ಮಾತ್ರ ಬರಬೇಕಷ್ಟೆ; ಕರ್ನಾಟಕದ ಇನ್ನುಳಿದ ವಿಶಾಲ ಭಾಗಗಳಿಂದೆಲ್ಲ ಬರುವ ಹಣ ಅಷ್ಟೂ ಕೂಡಿದರೂ ಅದು 'ಚಿಲ್ಲರೆ ಕಾಸು' ಮಾತ್ರವಾಗುತ್ತದೆ—ಎಂಬುದು ಇವತ್ತಿಗೂ ಕನ್ನಡದಲ್ಲಿರುವ ವಾಸ್ತವ ಪರಿಸ್ಥಿತಿ.

ಇಂಡಿಯಾದಲ್ಲಿ ದೊರಕುವ 'ಪ್ರದರ್ಶನ ಸೌಲಭ್ಯ'ವನ್ನು ಹೋಲಿಸಿ ಹೇಳು ವಾಗ ನಾವು ಸಲೀಸಾಗಿ ಹೇಳಿಬಿಡುತ್ತೇವೆ—ಒಂದು ಸಾವಿರ ಜನಸಂಖ್ಯೆಗೆ ಇರುವ ಆಸನ ಸೌಲಭ್ಯಗಳ ಗಣನೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ೪೯, ಬ್ರಿಟನ್

ನಲ್ಲಿ ೨೬, ಜಪಾನ್‌ನಲ್ಲಿ ೧೯, ಭಾರತದಲ್ಲಿ ೮—ಎಂದು. ಆ ದೇಶಗಳಲ್ಲಿ ಟೆಲಿವಿಜನ್ ಎಷ್ಟೋ ಮಟ್ಟಿಗೆ ಸಿನೆಮಾದ ಕಾರ್ಯಗಳನ್ನು ನಿರ್ವಹಿಸಿಕೊಡುತ್ತಿದೆ, ನಮ್ಮಲ್ಲಿ ಅದಿಲ್ಲ—ಎನ್ನುವುದನ್ನು ಗಮನಿಸಿದರೆ, ಮೇಲೆ ಹೇಳಿದ ಸಾವಿರಕ್ಕೆ ಎಂಟು ಎನ್ನುವ ಗಣನೆ ಸುಳ್ಳಾಗಿ ಬಿಡುತ್ತದೆ. ಅಷ್ಟರ ಮೇಲೆ, ಈ 'ಎಂಟು' ಎನ್ನುವುದರಲ್ಲಿ ನಗರ ಪಟ್ಟಣಗಳ ಇಂಡಿಯಾಕ್ಕೆ ಸಿಕ್ಕಿರುವುದೆಷ್ಟು ಹಾಗೂ ಗ್ರಾಮಾಂತರ ಇಂಡಿಯಾಕ್ಕೆ ಸಿಕ್ಕಿರುವುದೆಷ್ಟು ಎಂದು ಲೆಕ್ಕಹಾಕಿ ನೋಡುವ ಆಸಕ್ತಿ ನಮಗೆ ಹುಟ್ಟುವುದೇ ಇಲ್ಲ.

ನನ್ನ ಒಂದು ಅಂದಾಜಿನಲ್ಲಿ ಹೇಳುವುದಾದರೆ—ಇಂಡಿಯಾದ ಒಟ್ಟು ಜನ ಸಂಖ್ಯೆಯಲ್ಲಿ, ಜೀವಮಾನದಲ್ಲಿ ಒಮ್ಮೆಯೂ ಸಿನೆಮಾವನ್ನು ನೋಡಿಯೇ ಇಲ್ಲದ ಜನ ಶೇ. ೮–೧೦ ರಷ್ಟಿರಬಹುದು. ಉಳಿದವರಲ್ಲಿ ಸು. ಶೇ. ೬೦–೭೦ ಮಂದಿ ಅಪರೂಪವಾಗಿ ಆಗಾಗ ಸಿನೆಮಾ ನೋಡುತ್ತಿರುತ್ತಾರಾದರೂ ಅದು ಭಾಷೆಯಾಗಿ ಕೆಲಸ ಮಾಡುವುದಕ್ಕೆ ಯಾವ ಕನಿಷ್ಠ ಸಮೀಪ ಪರಿಚಯ ಅಗತ್ಯವೋ ಅಷ್ಟನ್ನು ಪಡೆದಿಲ್ಲ. ನಮ್ಮ ಜನಸಂಖ್ಯೆಯಲ್ಲಿ ಹೆಚ್ಚೆಂದರೆ ಶೇ. ೨೦–೨೫ ಮಂದಿ ಮಾತ್ರ ಸಿನೆಮಾಕ್ಕೆ ಸಾಕಷ್ಟು ಒಡ್ಡಿಕೊಂಡವರಾಗಿದ್ದಾರೆ.

ಇಂಡಿಯಾದಲ್ಲಿನ ಪ್ರದರ್ಶನಾವಕಾಶ ವಿಸ್ತರಿಸಲು ಉದ್ಯಮ ಚಿತ್ರರಂಗ ಕೆಲ ಮಟ್ಟಿನ ಪ್ರಯತ್ನಗಳನ್ನು ಮಾಡುತ್ತ ಬಂದಿದೆಯೆಂಬ ಸಂಗತಿಯನ್ನು ಅಲ್ಲಗಳೆಯುವ ಹಾಗಿಲ್ಲ. ಅದಕ್ಕೆ, ನಮ್ಮ ದೇಶಕ್ಕೆ ವಿಶಿಷ್ಟ ಎನ್ನುವಂಥ ಸಂಚಾರಿ ಚಿತ್ರಮಂದಿರಗಳೇ ಸಾಕ್ಷಿ. ಆದರೆ ಈ ಮಾಧ್ಯಮವನ್ನು ಜನೋಪಯೋಗಿಯಾಗಿ ಬಳಸಿಕೊಳ್ಳಬೇಕು ಎಂಬ ಉದ್ದೇಶವನ್ನು ಭಜನೆಮಾಡಿಕೊಂಡು ನಮ್ಮ ಸಿನೆಮಾದ ಒಂದು ದೊಡ್ಡ ಭಾಗವನ್ನು ಮೀಸಲು ಕಾದಿರಿಸಿಕೊಂಡು ಆ ಬಗ್ಗೆ ಅಪಾರ ಹಣ ವೆಚ್ಚ ಮಾಡು ತ್ತಿರುವ ಹಾಗೂ ಜಗತ್ತಿನಲ್ಲೇ ಈ ರೀತಿಯ ಸರ್ಕಾರಿ ಸಂಸ್ಥೆಗಳಲ್ಲಿ ಅತ್ಯಂತ ಬೃಹತ್ತಾದ್ದೆನ್ನುವ ಬ್ಯುರೊಕ್ರಸಿ ಭವನ ಕಟ್ಟಿಕೊಂಡಿರುವ ಸರ್ಕಾರ ಈ ಬಗ್ಗೆ ಏನು ಮಾಡಿದೆ ? ಸಿನೆಮಾ ಮಾಧ್ಯಮವನ್ನು ಜನಸಂಪರ್ಕಕ್ಕಾಗಿ ಬಳಸಲು ಟೊಂಕ ಕಟ್ಟಿ ಕೊಂಡು ಅಪಾರ ವೆಚ್ಚದಿಂದ ಆ ಮಾಧ್ಯಮದಲ್ಲಿ ಅಪಾರವನ್ನು ತಯಾರಿಸಿ ರಾಶಿ ಹಾಕಿರುವ ಸರ್ಕಾರ ಆ ಮಾಧ್ಯಮ ಹೆಚ್ಚು ಜನಕ್ಕೆ ಸುಲಭವಾಗಿ ನಿಲುಕುವಂತಾಗಲು ಏನು ಮಾಡಿದೆ ? ನಮ್ಮ Films Division ಭಾರೀ ಬಜೆಟ್ಟನ್ನು ಕರಗಿಸಿ ತಯಾರಿಸುವ ಅಸಂಖ್ಯ ಚಿತ್ರಗಳು ಪ್ರದರ್ಶನಕ್ಕಾಗಿ ಉದ್ಯಮ ರಂಗದ ಥೇಟರ್ ಗಳನ್ನು ಅವಲಂಬಿಸಿಕೊಂಡಿವೆ. ಈ ಚಿತ್ರಗಳ ಪ್ರದರ್ಶನಕ್ಕಾಗಿಯೇ ಮೀಸಲಾದ ಕೆಲವು ಥೇಟರ್‌ಗಳನ್ನು ಕೆಲವು ಮುಖ್ಯ ನಗರಗಳಲ್ಲಿ ಸ್ಥಾಪಿಸುವ ಉದ್ದೇಶ ಇಟ್ಟು ಕೊಂಡು ಡೆಲ್ಲಿಯಲ್ಲಿ ಅಂಥದೊಂದು ಥೇಟರ್ ನಿರ್ಮಿಸಿ ಅಯಶಸ್ವಿಯಾದದ್ದು ತಟ್ಟನೆ ನೆನಪಾಗುತ್ತದೆ. ಸಿನೆಮಾ ಎಂದರೆ ಏನೆಂದು ಕೂಡ ಗೊತ್ತಿಲ್ಲದಿರುವ ಜನರೂ ಇರುವಂಥ ದೇಶದಲ್ಲಿ ಸಿನೆಮಾಕ್ಕೆ ಹೆಚ್ಚು ಒಡ್ಡಿಕೊಂಡಿರುವ ಜನಸಮುದಾ

ಯುಗಳಿರುವ ನಗರಗಳಲ್ಲೇ ಪುನಃ ಥೇಟರ್ ಕಟ್ಟಬೇಕೆನ್ನಿಸಿದ್ದು ಮತ್ತು ಇಂದಿನ ಈ ರಾಷ್ಟ್ರದ ಸ್ಥಿತಿಯಲ್ಲಿ ತಾನು ತಯಾರಿಸಿದ ಚಿತ್ರಗಳಿಗಾಗಿಯೇ ಹೊಸಲಾದ ಥೇಟರ್ ಬೇಕೆನ್ನಿಸಿದ್ದು ಹಾಸ್ಯಾಸ್ಪದವಾದ್ದು ಮಾತ್ರವಲ್ಲದೆ ಶಿಕ್ಷಾರ್ಹವಾದ ದುಂದು ಎಂದು ನನಗನ್ನಿಸುತ್ತದೆ.

ಇನ್ನು–ಹಳ್ಳಿಗಳ ಕಡೆ ಆಗಾಗ ದಾಳಿಮಾಡುವ ಸರ್ಕಾರಿ ಏಜನ್ಸಿಗಳ 16 mm Projectorನ Mobile Unitನ ದಂಡು ತೀರಾ ನಿಷ್ಪ್ರಯೋಜಕ. ಅದರಲ್ಲಿ ಆಸಕ್ತಿಯಿಲ್ಲದ ಕೆಳವರ್ಗದ ಅಧಿಕಾರಿಗಳು ಡೈರಿ ತುಂಬಿಸುವ ಸಲುವಾಗಿ ನಡೆಸುವ ಈ ಗ್ರಾಮ ಯಾತ್ರೆಗಳು ಬರೀ ಕಾಟಾಚಾರವಷ್ಟೇ. ಅಲ್ಲದೆ, ಇಂಥ ಪ್ರದರ್ಶನ ಗಳಲ್ಲಿ ಗ್ರಾಮೀಣ ಜನರು ತಮ್ಮ ನಿತ್ಯದ ಬೇಸರದ ಬದುಕಿನ ಮಧ್ಯೆ ಅಪರೂಪ ವಾಗಿ ಒಂದು ಹೊಸ ಯಂತ್ರ ಕಾಣುತ್ತಾರಲ್ಲದೆ ಮತ್ತಾವ ಜೈವಿಕ ಸಂಪರ್ಕವನ್ನು ಪಡೆಯುವುದಿಲ್ಲ. ನಡು ಬಯಲಲ್ಲಿ ನಸುಬೆಳಕಲ್ಲಿ ನಿಂತು ೬–೮ ಅಡಿಗಳ ಕಿರು ತೆರೆಯ ಮೇಲೆ ನೋಡಬೇಕಾದ ಇಂಥ ಪ್ರದರ್ಶನ ಮುಚ್ಚಿದ ಆವರಣದ ಕತ್ತಲಲ್ಲಿ ಕೂತು ಪ್ರಜ್ವಲಿಸುವ ಸೂಕ್ತ ಗಾತ್ರದ ಬಿಂಬಗಳನ್ನು ಕಾಣುತ್ತ ತಲ್ಲೀನತೆ ಪಡೆಯುವ ಸಿನೆಮಾದ ಅನನ್ಯ ಅನುಭವವನ್ನೇ ಸುಳ್ಳುಮಾಡಿಬಿಡುತ್ತದೆ.

ಸೆಲುಲಾಯ್ಡ್‌ನ ಬೆಟ್ಟದೆತ್ತರದ ರಾಶಿಗಳನ್ನು ನಿರ್ಮಿಸಿ ಪೇರಿಸುವುದಕ್ಕೇ ಮೊದಲಾಗಿ ವೆಚ್ಚ ಮಾಡುವ ಬದಲು ಅದರಲ್ಲಿ ಅರ್ಧವನ್ನಾದರೂ ಸಿನೆಮಾ ಜನ ರಿಗೆ ಸುಲಭವಾಗಿ ಎಟಕುವ ಬಗ್ಗೆ ವೆಚ್ಚ ಮಾಡಿದ್ದರೆ ಮತ್ತು ಸಿನೆಮಾ ವಿಶಾಲ ವ್ಯಾಪ್ತವಾಗಬೇಕೆಂಬ ಗಾಢ ಕಾಳಜಿ ಇದ್ದಿದ್ದರೆ ಆ ಕೆಲಸ ಅಸಾಧ್ಯವೇನೂ ಆಗು ತ್ತಿರಲಿಲ್ಲ. ಗ್ರಾಮಾಂತರಗಳಲ್ಲಿ ಗ್ರಾಮ ಪಂಚಾಯಿತಿಗಳೋ ಸಹಕಾರಿ ಸಂಘಗಳೋ ಖಾಸಗಿಯವರೋ ಅಲ್ಲಲ್ಲಿ ದೊರೆಯುವ ಇಲ್ಲವೆ ಸುಲಭದಲ್ಲಿ ಕಟ್ಟಿಸಬಹುದಾದ ಚಿಕ್ಕ ಚಿಕ್ಕ ಹಾಲ್‌ಗಳಲ್ಲಿ 16 mm Projector ಮೂಲಕ ಪ್ರದರ್ಶನಗಳನ್ನು ನಡೆಸುವಂತೆ ಪ್ರೋತ್ಸಾಹಿಸಬಹುದಿತ್ತು. Arc-lamp ಬಳಸುವ ಹೆಚ್ಚು ಉಜ್ವಲ ಬಿಂಬಗಳನ್ನು ಮೂಡಿಸುವ ಸಾಮರ್ಥ್ಯವುಳ್ಳ 16 mm ಪ್ರೊಜೆಕ್ಟರ್ ತಯಾರಿಸಲು ಪ್ರೋತ್ಸಾಹಿಸಿ, ಅಗತ್ಯಬಿದ್ದರೆ ಅದಕ್ಕೆ ಸಹಾಯಧನ ಕೊಟ್ಟು—ಅವು ಗ್ರಾಮಾಂತರ ಚಿತ್ರಮಂದಿರಗಳಿಗೆ ಒದಗುವಂತೆ ಮಾಡಬಹುದಿತ್ತು. ಅಂಥ ಪ್ರೊಜೆಕ್ಟರ್ ಮೂಲಕ ಸುಮಾರು '18X13'ಗಿಂತ ಕಡಿಮೆಯಿಲ್ಲದ ಅಳತೆಯ ತೆರೆಯ ಮೇಲೆ ಪ್ರದರ್ಶನಗಳು ನಡೆಯುವಂತೆ, ಆ ಮೂಲಕ ಗ್ರಾಮಾಂತರದ ಜನಕ್ಕೆ ಸಿನೆಮಾ ಸುಲಭದಲ್ಲಿ ಎಟಕು ವಂತೆ ಮಾಡಲು ಸಾಧ್ಯವಿತ್ತು. ನಮ್ಮ ಕಮರ್ಷಿಯಲ್ ಚಿತ್ರರಂಗ ಈ ದೇಶದಲ್ಲಿ ಟೆಂಟ್ ಸಿನೆಮಾಗಳ ಒಂದು ಹೊಸ ಪದ್ಧತಿಯನ್ನೇ ರೂಢಿಗೊಳಿಸಿದಂತೆ ವಿಶಿಷ್ಟ

ವಾದ ಸರಳ ಗ್ರಾಮಾಂತರ ಚಿತ್ರಮಂದಿರಗಳ ಇನ್ನೊಂದು ಹೊಸ ಪದ್ಧತಿಯನ್ನು ಸಾಧ್ಯಗೊಳಿಸಬಹುದಿತ್ತು.

ನಮ್ಮ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನ ಕೆಲವು ರಾಜ ಭವ್ಯ ಥೀಟರುಗಳ ವೈಭವ ಕಂಡರೆ ಬೆರಗಾಗುತ್ತದೆ. ಅಂಥ ಒಂದೊಂದೇ ಥೇಟರಿನ ವೆಚ್ಚದಲ್ಲಿ ಸೌಕರ್ಯವುಳ್ಳ ಸರಳವಾದ ೧೫ ಥೇಟರ್‌ಗಳನ್ನು ಕಟ್ಟಬಹುದಿತ್ತು. ಅಂಥ ಅನಗತ್ಯ ದುಂದನ್ನು ನಿಯಂತ್ರಿಸುವುದು ಹಾಗೂ ಆ ಹಣ ಬೇರೆ ಕಡೆಗಳಲ್ಲಿ ಥೇಟರ್ ಕಟ್ಟಲು ಬಳಕೆಯಾಗುವಂತೆ ನಿರ್ದೇಶಿಸುವುದು ಸರ್ಕಾರಕ್ಕೆ ಅಸಾಧ್ಯವಾಗಿರಲಿಲ್ಲ. (ಸೋವಿಯತ್ ರಷ್ಯಾದಲ್ಲಿ, ಕ್ರಾಂತಿಯ ಅನಂತರದ ಪುನರ್ನಿರ್ಮಾಣದ ಯುಗದಲ್ಲಿ, ಸಿನೆಮಾ ಯಾವ ತೀವ್ರತೆಯಿಂದ ಬಳಕೆಯಾಯಿತೆಂಬುದನ್ನೂ ಅದರಿಂದ ಆ ಕಾಲಕ್ಕೆ ಅಲ್ಲಿ ಸಿನೆಮಾದ ಎಂಥ ಮಹತ್ತರ ಸಾಧನೆಗಳು ನಡೆದುವೆಂಬುದನ್ನೂ ನಾವು ಅರಿತಿದ್ದೇವೆ. ಆದರೆ ಆ ಕಾಲಕ್ಕೆ ಅಲ್ಲಿದ್ದ ಥೇಟರ್‌ಗಳು ಅತ್ಯಂತ ಸರಳವಿದ್ದವು. ಒಂದೇ ಪ್ರೊಜೆಕ್ಟರ್ ಅಲ್ಲದೆ ಎರಡನ್ನು ಬಳಸುವ ರೂಢಿಯೇ ಅಲ್ಲಿರಲಿಲ್ಲವಂತೆ.)

ಈಗಿನ ವಸ್ತುಸ್ಥಿತಿಯನ್ನು ಗಮನಿಸಿದರೆ, ಅಪಾರ ಸಾಮರ್ಥ್ಯವುಳ್ಳ ಸಿನೆಮಾದಂಥ ಸಂಪರ್ಕ ಮಾಧ್ಯಮವನ್ನು ರಾಷ್ಟ್ರದ ಶೇ. ೨೦-೨೫ ಜನರ ಸಂಪರ್ಕಕ್ಕಾಗಿ ಬಳಸುತ್ತಿದ್ದೇವೆ. ಈ ಮೂಲಕ ನಗರ ಪಟ್ಟಣವಾಸಿಗಳ ಶೇ. ೨೦-೨೫ರ ಈ ಒಂದು ಗುಂಪು ಹಾಗೂ ಇನ್ನುಳಿದ ಶೇ. ೭೫-೮೦ರ ಗ್ರಾಮಾಂತರ ಜನರ ಗುಂಪು ಇವೆರಡರ ಮಧ್ಯೆ ಹೊಸ ಕಂದಕವನ್ನು ನಿರ್ಮಿಸಲು ಸಿನೆಮಾವನ್ನು ಬಳಸುತ್ತಿದ್ದೇವೆ; ಅದಕ್ಕಾಗಿ ಅಪಾರ ಶ್ರಮವನ್ನೂ ಹಣವನ್ನೂ ತೊಡಗಿಸಿ ಹೆಣಗುತ್ತಿದ್ದೇವೆ.

ಹಿಂದಿನಿಂದ ಬೆಳೆದುಕೊಂಡು ಬಂದ ಜಾತಿಭಿನ್ನತೆ ವರ್ಗಭಿನ್ನತೆಗಳು ಈ ದೇಶವನ್ನು ಹೋಳು ಹೋಳು ಮಾಡಿವೆ. ಈ ೩೦ ವರ್ಷಗಳಲ್ಲಿ ಅವುಗಳನ್ನೆಲ್ಲ ನಿವಾರಿಸಬೇಕೆಂಬ ಬೃಹತ್ ಘೋಷಣೆಗಳನ್ನು ಗುಡುಗಿಸುತ್ತ, ಹಲವೊಮ್ಮೆ ಅಪ್ಪಟ ಮುಗ್ಧತೆಯಿಂದ ಹಲವೊಮ್ಮೆ ರಾಜಕೀಯ ಸ್ವಾರ್ಥಸಾಧನೆಯ ಕುಟಿಲತೆಯಿಂದ ಈ ಭಿನ್ನತೆಗಳನ್ನೆಲ್ಲ ಉಳಿಸಿಕೊಂಡು ಬೆಳೆಸಿಕೊಳ್ಳುತ್ತಲೇ ಬಂದಿದ್ದೇವೆ. ಇವುಗಳ ಜತೆಯಲ್ಲಿ ಹೊಸ ಹೊಸ ಅಭಿವೃದ್ಧಿ ಯೋಜನೆಗಳ ಮುಖಾಂತರ ಹಿಂದೆ ಅಷ್ಟು ಬೃಹದಾಕಾರವಾಗಿ ಇದ್ದಿಲ್ಲದ ನಗರ-ಗ್ರಾಮಗಳ ಭಿನ್ನತೆಯನ್ನು ಯಶಸ್ವಿಯಾಗಿ ಸಾಧಿಸಿದ್ದೇವೆ. ಜಾತಿಯಲ್ಲಿ ಕೆಳಗಿನವರು ವರ್ಗಗಳಲ್ಲಿ ಕೆಳಗಿನವರು ಹೆಚ್ಚಾಗಿ ಗ್ರಾಮಾಂತರಗಳಲ್ಲೇ ಉಳಿಯಬೇಕಾಗಿ ಬಂದು, ಈ ನಾಗರಿಕ-ಗ್ರಾಮೀಣ ಭಿನ್ನತೆ ಪರಸ್ಪರ ಅಸ್ಪೃಶ್ಯವೆನ್ನುವ ಹಂತ ಮುಟ್ಟಿದೆ.

ಈಗಾಗಲೇ ನೋಡಿದಂತೆ, ಈ ಕಂದಕ ನಿರ್ಮಾಣದಲ್ಲಿ ಸಿನೆಮಾದಂಥ ಸಾಮೂಹಿಕ ಸಂಪರ್ಕ ಮಾಧ್ಯಮವನ್ನು ಬಿಡದೆ ಬಳಸಿಕೊಂಡಿದ್ದೇವೆ. ಸಾಮೂಹಿಕ ಸಂಪರ್ಕವನ್ನು ಸಾಧಿಸುವುದಕ್ಕಾಗಿಯೇ ಹುಟ್ಟಿಕೊಂಡ ಮಾಧ್ಯಮ ಹೀಗೆ ಭಿನ್ನತೆಯನ್ನು ಸೃಷ್ಟಿಸಿ ನಿಸ್ಸಂಪರ್ಕಕ್ಕೆ ದಾರಿ ಮಾಡಿಕೊಡುವ ಚೋದ್ಯವನ್ನು ನಾವು ಸಾಧಿಸಿದ್ದೇವೆ.

(ಈ ಶತಮಾನದ ಆರಂಭದಿಂದ ಈ ತನಕದ ಅವಧಿಯಲ್ಲಿ, ಅಥವಾ ಹೆಚ್ಚಾಗಿ ಸ್ವಾತಂತ್ರ್ಯೋತ್ತರದ ಈ ೩೦ ವರ್ಷಗಳ ಅವಧಿಯಲ್ಲಿ, ನಮ್ಮಲ್ಲಿ ಬೆಳೆದಿರುವ ನಾಗರಿಕ-ಗ್ರಾಮೀಣ ಭಿನ್ನತೆಯನ್ನು ನಮ್ಮ ಸಿನೆಮಾಗಳ ಮೂಲಕವೇ ಅಳೆದು ನೋಡಬಹುದು. ಫಾಲ್ಕೆಯವರ ಚಿತ್ರವನ್ನು ನೋಡಿ : ಅದನ್ನು ಆಗ ಇಂಡಿಯಾದ ಯಾವುದೇ ಬೃಹತ್ ನಗರದಲ್ಲೂ, ಮೂಲೆಯ ಹಳ್ಳಿಯಲ್ಲೂ ಏಕಪ್ರಕಾರ ಮೆಚ್ಚಬಹುದಿತ್ತು. ಈಚಿನ ಕಮರ್ಷಿಯಲ್ ಹಿಂದಿ ಸಿನೆಮಾಗಳನ್ನು ತೆಗೆದುಕೊಳ್ಳಿ-ಅವುಗಳಲ್ಲಿ ಕಾಣುವ ಜೀವನ ವಿಧಾನ ನಗರ ಪಟ್ಟಣಗಳ ಜನಕ್ಕೆ ಆಕರ್ಷಕವೆನ್ನಿಸಿದರೆ ನಮ್ಮ ಗ್ರಾಮೀಣ ಪ್ರೇಕ್ಷಕರಿಗೆ ಇದು ನಮ್ಮದಲ್ಲವೇ ಅಲ್ಲ ಎನ್ನಿಸಿಬಿಡಬಹುದು.)

ಒಂದು ಪಕ್ಷ ಸಿನೆಮಾ ಇಂಡಿಯಾದ ಇಡೀ ಜನಸಮೂಹಕ್ಕೆ ಒಂದೇ ಸಮನಾಗಿ ಎಟುಕುವಂತೆ ಮಾಡುವುದು ಸಾಧ್ಯವಾಗಿದ್ದರೆ, ಅದರಿಂದ ಈ ಜನಸಮೂಹದಲ್ಲಿ ಎಂಥ ಅದ್ಭುತ ಮಾನಸಿಕ ಸಮಾನತೆ ಸಾಧಿಸಬಹುದಿತ್ತು ಎನ್ನುವುದನ್ನು ನಾವು ಪ್ರಾಯೋಗಿಕವಾಗಿ ಹಾಗೆ ಮಾಡಿ ನೋಡಿಕೊಂಡಾಗ ಮಾತ್ರ ನಂಬಲು ಸಾಧ್ಯ. ಅತ್ಯಲ್ಪ ಪ್ರಮಾಣದಲ್ಲಿ ನಮ್ಮ ಹಳ್ಳಿಯಲ್ಲೇ ನಾವು ಇಂಥ ಪ್ರಯೋಗ ಮಾಡಿ ಪರಿಣಾಮವನ್ನು ಪ್ರತ್ಯಕ್ಷ ಕಂಡುಕೊಂಡಿರುವ ಧೈರ್ಯದಿಂದ ಈ ಮಾತು ಹೇಳುತ್ತಿದ್ದೇನೆ.

ಸಿನೆಮಾ ಇಂಡಿಯಾದ ಎಲ್ಲಾ ಮೂಲೆಗಳನ್ನೂ ಸಮಾನವಾಗಿ ತಲಪುವುದು ಸಾಧ್ಯವಾಗಿದ್ದರೆ ನಮ್ಮ ಕಮರ್ಷಿಯಲ್ ಸಿನೆಮಾದ ರೂಪ ತೀರಾ ಬೇರೆಯೇ ಆಗಿರುತ್ತಿತ್ತು—ಎಂದು ನನಗೆ ಅನ್ನಿಸುತ್ತದೆ. ಈಗ ಅದು ತನಗಿರುವ ಮಿತ ಸಂಖ್ಯೆಯ ನಾಗರಿಕ ಪ್ರೇಕ್ಷಕರ ಅಪೇಕ್ಷೆಯನ್ನು ಅವಲಂಬಿಸಿಕೊಂಡು ಈ ರೂಪದಲ್ಲಿದ್ದರೆ, ಆಗ ಇಡೀ ಇಂಡಿಯಾದ ಸಮಸ್ತ ಜನರ ಅತ್ಯಂತ ವಿಭಿನ್ನ ಅಪೇಕ್ಷೆಗಳ ಒತ್ತಡದಲ್ಲಿ ಬೇರೆ ರೂಪವನ್ನೇ ತಾಳಬೇಕಿತ್ತು. ಮತ್ತೇನಲ್ಲದಿದ್ದರೂ ಅದು ಈಗಿನಷ್ಟು ಏಕತಾನದ್ದಾಗಿರಲು ಸಾಧ್ಯವಿರಲಿಲ್ಲ.

ಸಿನೆಮಾಕ್ಕೆ ಇಡೀ ಜನಸಮೂಹ ನಿರಂತರವಾಗಿ ಒಡ್ಡಿಕೊಂಡದ್ದಾಗಿದ್ದರೆ, ಅದು ಅವರ ನಿತ್ಯ ಬಳಕೆಯಲ್ಲಿರುವಂಥದ್ದಾಗಿದ್ದರೆ, ಆಗ ಅದು ನಿಜವಾದ ಸಮೂಹ ಭಾಷೆಯಾಗಿ ಕೆಲಸಮಾಡಬಲ್ಲ ಸಾಧ್ಯತೆಗಳಿರುತ್ತಿದ್ದವು. ಆದರೆ ಗ್ರಾಮಾಂತರದ

ಶೇ. ೭೫-೮೦ ಜನ ಅದರ ಸಮೀಪ ಪರಿಚಯವಿಲ್ಲದವರಾಗಿದ್ದಾರೆ. ಅವರಿಗೆ ನಮ್ಮ ಸರ್ಕಾರಿ ಏಜೆನ್ಸಿಗಳು ಕೊಂಡೊಯ್ದು ತೋರಿಸುವ ಚಿತ್ರಗಳಾದರೂ ಎಂಥವು ? ಗೊಬ್ಬರದ ಬಗ್ಗೆಯೋ ನಸ್‌ಬಂದಿಯನ್ನು ಕುರಿತೋ ಹೇಳುವಂಥ ಚಿತ್ರಗಳೇ. ಕೊಂಚ ಕಲಾತ್ಮಕವೋ ಬೌದ್ಧಿಕವೋ ಆದ ಚಿತ್ರಗಳಿದ್ದರೂ ಅವು ಗ್ರಾಮೀಣ ಜನರ ಮಟ್ಟಕ್ಕೆ ಮೀರಿದ್ದು ಎಂದು ನಾವೇ ನಿರ್ಣಯಿಸಿ ಅವನ್ನು ನಾಗರಿಕ ಪ್ರೇಕ್ಷಕರಿಗೆ ಮಾತ್ರ ತೋರಿಸುತ್ತೇವೆ. ಗೊಬ್ಬರ ನಸ್‌ಬಂದಿಗಳ ಬಗ್ಗೆಯೇ ಚಿತ್ರಗಳನ್ನು ನೋಡಿ ನೋಡಿ ಗ್ರಾಮೀಣ ಜನರ ಪಾಲಿಗೆ ಸಿನೆಮಾ ಗೊಬ್ಬರದ ಸಂಕೇತವೋ ನಸ್‌ಬಂದಿಯ ಸಂಕೇತವೋ ಆಗಿಬಿಡುತ್ತದೆಯಲ್ಲದೆ ಭಾಷೆಯಾಗುವುದಿಲ್ಲ.

ಸಿನೆಮಾ ಇಡೀ ಸಮೂಹದಲ್ಲಿ ಸಮಾನವಾಗಿ ಭಾಷೆಯ ರೂಪದಲ್ಲಿ ಬಳಕೆಯಾಗಬೇಡವೇ ? ಯಾವುದೇ ಭಾಷೆಯ ಹಾಗೆ ಸಿನೆಮಾವನ್ನು ಕೂಡಾ ಶಾಸ್ತ್ರ (ಜ್ಞಾನ)ಕ್ಕಾಗಿ ವ್ಯವಹಾರ (ನಿತ್ಯದ ತಿಳಿವು ಮನರಂಜನೆ ಇತ್ಯಾದಿ)ಕ್ಕಾಗಿ, ಕಲೆ (ಗಾಢ ಅನುಭವಗಳ ಸಂವಹನ)ಗಾಗಿ ಬಳಸಲು ಬರುತ್ತದೆ ಎಂಬುದು ತಿಳಿಯದಿದ್ದಲ್ಲಿ, ಸಿನೆಮಾ ಭಾಷೆಯ ಸಮಗ್ರ ಸ್ವರೂಪ ಪರಿಚಯವಾಗದಿರುವಲ್ಲಿ ಅಂಥವರಿಗೆ ಆ ಭಾಷೆಯನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಏನನ್ನು ತಾನೆ ಹೇಳಲು ಸಾಧ್ಯ?

ಅಭಿವೃದ್ಧಿಗೆ ಸಿನೆಮಾದ ಬಳಕೆ ಮಾಡಿಕೊಳ್ಳಬೇಕು ಎಂಬ ತೀವ್ರ ಹಂಬಲ ನಮಗಿದೆ, ಸುಳ್ಳಲ್ಲ. **ಆದರೆ ಸಮಗ್ರ ಅಭಿವೃದ್ಧಿಯ ಕಲ್ಪನೆ ಹಾಗೂ ಸಮಗ್ರ ಸಿನೆಮಾದ ಕಲ್ಪನೆ ಎರಡೂ ನಮ್ಮಲ್ಲಿ ಕಾಣುವುದಿಲ್ಲ.** ಡೆಲ್ಲಿಯಲ್ಲಿ ಕೂತು ಎದುರಿಗೆ ರಾಷ್ಟ್ರದ ಭೂಪಟ ಹರಡಿಕೊಂಡು ಇಂಥಿಂಥಲ್ಲಿ ಇಂಥಿಂಥದು ಆಗಬೇಕು ಎಂದು ನಾವು ಕಾಗದದ ಮೇಲೆ ಕಾರಿಕೊಳ್ಳುವ ಯೋಜನೆಯಷ್ಟೇ ನಮಗೆ ಅಭಿವೃದ್ಧಿ ಎನಿಸುತ್ತದೆ. ಅದರ ಎಂಜಲು ಹಂಚುವಂತೆ, ಆ ಯೋಜನೆಗಳನ್ನು ಚಿತ್ರರೂಪದಲ್ಲಿ ಸೆಲುಲಾಯ್ಡ್‌ನ ಮೇಲೆ ಮೂಡಿಸಿದ್ದೇ 'ಉಪಯುಕ್ತ ಸಿನೆಮಾ' ಎನ್ನಿಸುತ್ತದೆ.

ಸಿನೆಮಾ ಸಮಗ್ರ ಮಾನವ ಚೇತನದ (ಮಾನವ ಜೀವದ, ಮನಸ್ಸಿನ, ಬುದ್ಧಿಯ. ಸಾಕ್ಷಿ ಪ್ರಜ್ಞೆಯ ಹಾಗೂ ಈ ಎಲ್ಲದರ ಒಟ್ಟಿನ) ಅಭಿವ್ಯಕ್ತಿಯಾಗಿ ಜನರನ್ನು ಮುಟ್ಟಬೇಕು. ಅಂಥ ಸಂಪರ್ಕದ ಮೂಲಕ ಜನ ಸಮಗ್ರವಾಗಿ ಬೆಳೆಯತೊಡಗಬೇಕು. ಅಂಥ ಬೆಳವಣಿಗೆಯ ಪ್ರತಿಕ್ರಿಯೆಯ ಅಂಗವಾಗಿ ಗೊಬ್ಬರ ಬಳಸುವುದು. ಹೆಚ್ಚು ಭತ್ತ ಬೆಳೆಯುವುದು ಮುಂತಾದವುಗಳಿಂದ ಮೊದಲುಗೊಂಡು, ಕಾವ್ಯ ಸಂಗೀತ ವಿಜ್ಞಾನ ತತ್ವಶಾಸ್ತ್ರಗಳ ಅನುಸಂಧಾನದ ತನಕ, ಆಯಾಯ ಅಭಿರುಚಿಗೆ ತಕ್ಕಂತೆ ಅದದು ಬೆಳೆದುಕೊಳ್ಳತೊಡಗುತ್ತದೆ. ಅದು ಸಮಗ್ರ ಅಭಿವೃದ್ಧಿ.

ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ಕ್ರಿಯೆ ಮಾನವ ಜೀವೋತ್ಸಾಹದ ತೀವ್ರ ಕ್ರಿಯೆ. ಯಂತ್ರ ಸಾಧನಗಳನ್ನು ಎಷ್ಟೇ ಬಳಸಿದರೂ ಆ ಕ್ರಿಯೆ ಯಾಂತ್ರಿಕವಾಗಬಾರದು. ಹೊಸದಾಗಿ ಯಂತ್ರಗಳನ್ನು ಬಳಸತೊಡಗಿ ನಮ್ಮಲ್ಲಿ ಉಂಟಾಗಿರುವ 'ಯಂತ್ರಮದ'ದಿಂದ ನಾವಿದನ್ನು ಯಾತ್ರಿಕವೆಂಬಂತೆ ಸಾಧಿಸಲು ಹೊರಟಿದ್ದೇವೆ.

ಅಲ್ಲದೆ, ಇಂಡಿಯಾ ಅಭಿವೃದ್ಧಿಗೊಳ್ಳಬೇಕು ಎಂದು ಯೋಚಿಸುವ 'ಸುಧಾರಕ'ರು (ರಾಜಕೀಯ ಸಾಮಾಜಿಕ ಆರ್ಥಿಕ ಇನ್ನಾವುದೇ ಕ್ಷೇತ್ರದಲ್ಲಿ) ತಟ್ಟನೆ— 'ಉದ್ಧಾರಕರ್ತ'ರಾದ ತಾವು ಮತ್ತು 'ಉದ್ಧಾರ ಪಾತ್ರ'ರಾದ ಜನಸಾಮಾನ್ಯರು ಎಂಬ ಎರಡು ವರ್ಗಗಳನ್ನು ಕಲ್ಪಿಸಿಕೊಂಡುಬಿಡುತ್ತಾರೆ. ಆದರೆ ನಿಜವಾದ ಅಭಿವೃದ್ಧಿ ಎನ್ನುವುದು ನನಗೆ ನಾನೇ ಸಾಧಿಸಿಕೊಳ್ಳುವಂಥದು. ಇಂಡಿಯಾ ಹಿಂದುಳಿದಿದೆ ಎಂದೊಡನೆ ಆ ಮಾತಿನಲ್ಲಿ, ಇಂಡಿಯಾದವನಾದ ನಾನು ಹಿಂದುಳಿದಿದ್ದೇನೆ ಎಂಬುದನ್ನು ನಾನೇ ನನ್ನಲ್ಲಿ ತೀವ್ರವಾಗಿ ಅನುಭವಿಸಲಿಕ್ಕಾಗದಿದ್ದಲ್ಲಿ, ನಮ್ಮ ಪ್ರತಿಕ್ರಿಯೆ ಔಪಚಾರಿಕವಷ್ಟೇ ಆಗಿಬಿಡುತ್ತದೆ. (ಗಾಂಧೀ ರೀತಿ, ನೆಹರೂ ರೀತಿ— ಇವುಗಳ ನಡುವೆ ಇದ್ದ ಭಿನ್ನತೆ ಇಂಥದೇ. ಇಂಡಿಯಾದ ಬಡತನವನ್ನು ಅನುಭವ ಮಾಡಿಕೊಂಡ ಗಾಂಧಿಗೆ ತುಂಡು ಬಟ್ಟೆಯನ್ನಲ್ಲದೆ ಬೇರೆ ಉಡಲಿಕ್ಕೇ ಸಾಧ್ಯವಾಗಲಿಲ್ಲ. ನೆಹರೂಗೆ ಇಂಡಿಯಾದ ಬಡತನ ಒಂದು ತಿಳಿವಳಿಕೆಯಾಗಿತ್ತು, ಅನುಭವವಾಗಿರಲಿಲ್ಲ.)

ಅಭಿವೃದ್ಧಿಗಳನ್ನು ಉದ್ದೇಶವಾಗಿಟ್ಟುಕೊಂಡ ನಮ್ಮ ಚಿತ್ರಗಳು ಇಂಥ 'ಉದ್ಧಾರಕ' attitude ನಿಂದ ಹುಟ್ಟಿಕೊಳ್ಳುವ ಕಾರಣ ಅವನ್ನು ನೋಡುವವರಿಗೆ ಅದು ನಮ್ಮದೇ ಆಂತರಿಕ ಧ್ವನಿಯಾಗಿ ಒಳಗೆ ಮೊಳಗುವುದೇ ಇಲ್ಲ. ವಿಶ್ವದ ಅಭಿವೃದ್ಧ ರಾಷ್ಟ್ರಗಳು ಅನಭಿವೃದ್ಧ ರಾಷ್ಟ್ರಗಳ ಬಗ್ಗೆ ತಾಳಿರುವ attitude ನಿಂದಾಗಿ ಅವು ನೀಡುವ 'ಧರ್ಮ ಸಹಾಯ'ಗಳು ಹೇಗೆ ವಿಫಲವಾಗಿವೆಯೋ ಹಾಗೆ, ತಾವು ನಮ್ಮ ಸುಧಾರಕವರ್ಗದವರು ಎಂದುಕೊಳ್ಳುವವರ attitudeನಿಂದ ನಮ್ಮ ಅಭಿವೃದ್ಧಿ ಕ್ರಿಯೆಗಳು ನಿಷ್ಫಲಗೊಂಡಿವೆ.

ಇನ್ನೊಂದು ಅತಿ ಮುಖ್ಯ ಸಂಗತಿಯನ್ನು ಇಲ್ಲಿ ಗಮನಿಸಬೇಕು. ನಮ್ಮ ಜನಸಂಪರ್ಕ ಮಾಧ್ಯಮಗಳು ಅವರಲ್ಲೂ ಅತ್ಯಂತ ವಿಶಾಲವ್ಯಾಪ್ತಿಯ ಸಾಮರ್ಥ್ಯವುಳ್ಳ ಭಾಷೆಯಾದ ಸಿನೆಮಾ ಯಾವ ರೀತಿಯ ಸಂಪರ್ಕಕ್ಕಾಗಿ ಬಳಕೆಯಾಗುತ್ತಿದೆ ಎನ್ನುವುದನ್ನು ನೋಡಬೇಕು. ಡೆಲ್ಲಿಯಲ್ಲಿ ಮೇಲೆ ಕೂತವರು ಈ ಭಾಷೆಯಲ್ಲಿ ಮಾತಾಡುತ್ತಾರೆ, ಇಂಡಿಯಾದ ಅಷ್ಟೂ ಜನ ವಿಧೇಯತೆಯಿಂದ ತಲೆತಗ್ಗಿಸಿ ಆಲೈಸುತ್ತೇವೆ.

ಅದು ಮೊದಮೊದಲು 'ಉಪದೇಶ ಮಾಧ್ಯಮ'ವಾಗಿ ಅನಂತರ ಕ್ರಮೇಣ ಅರಿವಿಲ್ಲದೆಯೇ 'ಆದೇಶ ಮಾಧ್ಯಮ'ವಾಗಿ ಪರಿವರ್ತನೆಗೊಂಡುಬಿಡುತ್ತದೆ; ಅಧಿಕಾರದ ಆಯುಧವಾಗಿ ಬಿಡುತ್ತದೆ. ಜನ ಜನಗಳ ಮಧ್ಯೆ ಸಂಭಾಷಣವನ್ನು ಸಾಧಿಸಬೇಕಾದ ಭಾಷೆ, ಆ ಕೆಲಸ ಮಾಡದೆ, ಸಂಪರ್ಕ ಮಾಧ್ಯಮದ ಬದಲು ಶೋಷಣ ಮಾಧ್ಯಮವಾಗಿ ಬಿಡುತ್ತದೆ—ಪ್ರಜಾಪ್ರಭುತ್ವದ ಸಾಧನಗಳನ್ನೇ ಕೊಂಚ ವಿಪರ್ಯಯಗೊಳಿಸಿ ಬಳಸಿಕೊಂಡು ಆ ಮೂಲಕವೇ ಸುಲಭವಾಗಿ ಸರ್ವಾಧಿಕಾರ ಸಾಧಿಸಿಬಿಡುವುದಿಲ್ಲವೇ—ಹಾಗೆ ಗಂಡಾಂತರಕಾರಿಯಾದ ಈ ಅಪಾಯದ ಬಗ್ಗೆ ನಾವು ನಿರಂತರ ಎಚ್ಚರವಾಗಿರಬೇಕು. ಈ ಭಾಷೆಯಲ್ಲಿ ಡೆಲ್ಲಿಯವರು ಮಾತ್ರವಲ್ಲ ಹಳ್ಳಿಯವರೂ ಮಾತನಾಡಲು ಸಾಧ್ಯವಾಗಬೇಕು. ಈ ಭಾಷೆಯನ್ನು ತಿಳಿದುಕೊಳ್ಳಲು ಮಾತ್ರವಲ್ಲ ಅದನ್ನು ಬಳಸಿ ತಾವೂ ಅದರಲ್ಲಿ ಮಾತಾಡಲು ಜನರಿಗೆ ಸಾಧ್ಯವಾಗಬೇಕು. ಅಷ್ಟು ಮಟ್ಟಿಗೆ ಈ ಭಾಷೆ ಅವರಿಗೆ ನಿಕಟವಾಗಬೇಕು. ಪುಣೆಯ Fil.n Institute ಪರಿಣತರನ್ನು ಸೃಷ್ಟಿಸಲಿ. ಆದರೆ, ಈ ಭಾಷೆಯನ್ನು ಬಳಸಲು ಅಪೇಕ್ಷಿಸುವ ಸಾಮಾನ್ಯರಿಗೂ ಅದನ್ನು ತಕ್ಕ ಮಟ್ಟಿಗೆ ಬಳಸಲು ಸಾಧ್ಯವಾಗುವಂತೆ ತಂತ್ರಗಳನ್ನು ಕಲಿತುಕೊಳ್ಳುವ ಹಾಗೂ ಚಿತ್ರನಿರ್ಮಾಣಕ್ಕೆ ಅವಕಾಶಗಳು ದೊರೆಯುವ ಸ್ಥಿತಿ ಉಂಟಾಗಬೇಕು. ಹತ್ತಾರು ಬೇರೆ ಬೇರೆ ಕಡೆಗಳಲ್ಲಿ ಈ ಬಗ್ಗೆ ಸಂಕ್ಷಿಪ್ತ ಅಭ್ಯಾಸ ಶಿಬಿರಗಳು ನಡೆಯುವಂತಿರಬೇಕು. ಶಾಬ್ದಿಕ ಭಾಷಾ ಸಂಸ್ಕೃತಿಯ ಜೊತೆಯಲ್ಲಿ ಸಿನೆಮಾ ಸಂಸ್ಕೃತಿ ಕೂಡಾ ಹಬ್ಬಿಕೊಳ್ಳುವಂಥ ಪ್ರಯತ್ನ ಮಾಧ್ಯಮಿಕ ಶಾಲೆಯ ಮಟ್ಟದಿಂದಲೇ ನಡೆಯುವಂತಾಗಬೇಕು.

ನಮ್ಮ Films Divisionನ ಪರಿಣತರಿಗೆ ಯಾವುದೇ ವಿಷಯ ಸೂಚಿಸಿ—ಆ ಬಗ್ಗೆ ಅವರು ತಕ್ಕ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಚಿತ್ರ ತಯಾರಿಸಿ ಕೊಡುತ್ತಾರೆ. ಆದರೆ ಆ ವಿಷಯದಲ್ಲಿ ತೀವ್ರವಾದ ಪ್ರೀತಿ ಆಸಕ್ತಿ ಇರುವವನಿಗೆ ಮಾತ್ರವೇ ಅದರಲ್ಲಿ ಆಕರ್ಷಣೆ ಹುಟ್ಟಿಸಬಲ್ಲ ಯಶಸ್ವಿ ಚಿತ್ರವನ್ನು ತಯಾರಿಸಲು ಸಾಧ್ಯ. ಭಾಷಾ ಪಂಡಿತನೊಬ್ಬನಿಗೆ ವಿಷಯ ಹೇಳಿದರೆ ಒಂದು ಅಚ್ಚುಕಟ್ಟಾದ ಪ್ರೇಮಗೀತ ಬರೆದುಕೊಡುತ್ತಾನೆ. ಆದರೆ ಇಪ್ಪತರ ಹರೆಯದ ತರುಣನೊಬ್ಬನ ತೀವ್ರ ತೊದಲಿನ ಹಾಗೆ ಅದು ಓದುಗರಲ್ಲಿ ಜೀವಂತ ಪ್ರತಿಕ್ರಿಯೆ ಹುಟ್ಟಿಸಲಾರದು.

* *

ಅಭಿವೃದ್ಧಿಗಾಗಿ ಹೆಣಗುತ್ತಿರುವ ನಮ್ಮ ರಾಷ್ಟ್ರದಲ್ಲಿ ಸಿನೆಮಾ ಮಾಧ್ಯಮವನ್ನು ಬಳಸಿಕೊಳ್ಳುತ್ತಿರುವ ರೀತಿ ನನಗಂತೂ ಭಯವನ್ನೇ ಹುಟ್ಟಿಸಿದೆ.ಅಭಿವೃದ್ಧಿ. ಜನಸಂಪರ್ಕ ಎಂದು ಭಜನೆಮಾಡುತ್ತ ನಾವು ಅದೇ ಸಾಧನಗಳನ್ನು ಬಳಸಿಕೊಂಡು ಅಪೇಕ್ಷಿತ ಮಾರ್ಗಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ಅಸಮಾನತೆಯ ಕಡೆ, ನಿಸ್ಸಂಪರ್ಕ

ಭಿನ್ನತೆಗಳ ಕಡೆ ಸಕಲ ಸಂಭ್ರಮದಿಂದ ಬಿಜಯಂಗೈಯುತ್ತಿರುವ ನಮ್ಮ ಅಭಿವೃದ್ಧಿ ಯಾತ್ರೆಯ ಚಿತ್ರ ಕಂಡು ಆತಂಕವಾಗುತ್ತದೆ. ಅದೇ ನನ್ನ ಹಳ್ಳಿಯಲ್ಲಿನ ಸಾಮಾನ್ಯ ಜನ 'ಪಥೇರ್ ಪಾಂಚಾಲಿ' 'ಬೈಸಿಕಲ್ ಥೀವ್ಸ್' 'ರಶೋಮಾನ್' 'ಬ್ಯಾಟಲ್ ಶಿಪ್ ಪೊಟೆಮ್‌ಕಿನ್'ನಂಥ ಚಿತ್ರಗಳನ್ನು ನೋಡಿ ವ್ಯಕ್ತಗೊಳಿಸಿದ ಅದ್ಭುತ ಪ್ರತಿ ಕ್ರಿಯೆ, 'ವೈಲ್ಡ್ ಸ್ಟ್ರಾಬರೀಸ್' 'ಹಿರೋಶಿಮಾ—'ದಂಥ ಚಿತ್ರಗಳನ್ನು ನಾಗರಿಕ ಪ್ರೇಕ್ಷಕರಿಗಿಂತ ಹೆಚ್ಚೇನೂ ಗೊಂದಲಗೊಳ್ಳದೆ ತಾಳ್ಮೆಯಿಂದ ನೋಡಿದ್ದು ಇದನ್ನು ಪ್ರತ್ಯಕ್ಷ ಕಂಡಾಗ ನನ್ನಲ್ಲಿ ಸ್ವಾತಂತ್ರ್ಯ ಸಮಾನತೆಗಳ ಬಗ್ಗೆ ಪ್ರಜಾಪ್ರಭುತ್ವದ ಬಗ್ಗೆ ಇದ್ದ ನಂಬಿಕೆ ನಿಜವಾಗಿ ಹರಳುಗಟ್ಟಿಕೊಳ್ಳಲು ಸಾಧ್ಯವಾಗಿದೆ.

'ಅಭಿವೃದ್ಧಿಗಾಗಿ ಸಿನೆಮಾ' ಎಂಬ ಮಾತನ್ನು ನಾವು ನಿರುಪಯೋಗಿಯಾಗುವಷ್ಟು ಅಥವಾ ಅಪಾಯಕಾರಿಯಾಗುವಷ್ಟು ಸರಳಗೊಳಿಸಿಕೊಂಡು ಬಿಟ್ಟಿರುವುದರಿಂದ ಈ ಸರಳೀಕರಣವನ್ನು ನೆನಪಿಸಿಕೊಡುವಂತೆ **'ಸಮಗ್ರ ಅಭಿವೃದ್ಧಿಗಾಗಿ ಸಮಗ್ರ ಸಿನೆಮಾ'** ಎಂಬ ಹೊಸ ಮಾತನ್ನು ನಾವು ಬಳಸುವುದು ಲೇಸು ಎನಿಸುತ್ತದೆ.

ಮುಗಿಸುವ ಮೊದಲು—

ನಮ್ಮ ವಿದ್ವತ್ ಸೆಮಿನಾರ್‌ಗಳಲ್ಲಿ ಸಾಮಾನ್ಯವಾಗಿ ನಿರೀಕ್ಷಿಸುವಂಥ ಪರಿಣತತನದ ನಿಶ್ಚಿತಮುದ್ರೆ ಕಾಣುವ ಪತ್ರಿಕೆಯನ್ನು ನಾನು ಮಂಡಿಸಿಲ್ಲ ಎಂಬುದು ನನಗೆ ಗೊತ್ತಿದೆ. ತನ್ನ ಸುತ್ತಣ ವಾಸ್ತವವನ್ನು ಮರೆಯದೆ ಆಧುನಿಕವೂ ಪ್ರಗತಿಶೀಲವೂ ಪ್ರಜಾಸತ್ತಾತ್ಮಕವೂ ಆದ ಹೊಸ ಇಂಡಿಯಾದ ಕನಸನ್ನು ಕಣ್ಣುಗಳಲ್ಲಿ ಮೂಡಿಸಿಕೊಂಡು ಕೈಗಳಲ್ಲಿ ಸಾಧ್ಯವಾಗಿಸಿಕೊಳ್ಳಲು ಹೆಣಗುತ್ತಿರುವ ಗ್ರಾಮಾಂತರ ಇಂಡಿಯಾದ ನಮ್ರ ನಿವಾಸಿಯೊಬ್ಬನ ಪ್ರಾಮಾಣಿಕ ತಲ್ಲಣ ಇದು—ಎಂದು ಭಾವಿಸಿ ಇದನ್ನು ಸ್ವೀಕರಿಸಬೇಕಾಗಿ ಅರಿಕೆಮಾಡಿಕೊಳ್ಳುತ್ತೇನೆ.

1978 ಒಂದು ಸೆಮಿನಾರ್‌ನಲ್ಲಿ ಮಂಡಿಸಿದ ಪತ್ರಿಕೆ ಇದು.

ಅಭಿವೃದ್ಧಿಗಾಗಿ ಸಿನೆಮಾ

ಅಕ್ಷರ ಪ್ರಕಾಶನ ಸಾಗರ ಕರ್ನಾಟಕ ರಾಜ್ಯ